## ನಿಮ್ಮ ಚಿಕಿತ್ಸಾಲಯದಲ್ಲಿ VAW /ಮಹಿಳಾ ದೌರ್ಜನ್ಯದ ಕುರಿತು ನೀವೇನು ಮಾಡಬಹುದು

- ಯಾರಿಗೂ ಯಾವುದೇ ಹಾನಿಯಾಗದಂತೆ ನೋಡಿಕೊಳ್ಳಿ
- ಹಿಂಸೆಯನ್ನು ಗುರುತಿಸಿ ಅಗತ್ಯವಿದ್ದರೆ ಪ್ರಶ್ನಿಸಿ
- ಸಹಾನುಭೂತಿ ತೋರಿಸಿ
- ಪ್ರಾಥಮಿಕ ಚಿಕಿತ್ಸೆ ನೀಡಿ
- ಹೆಚ್ಚಿನ ಚಿಕಿತ್ಸೆಗಾಗಿ ಸುಸಜ್ಜಿತ ಆಸ್ಪತ್ರೆಗೆ ಕಳುಹಿಸಿ
- ದಾಖಲೆಗಳನ್ನು ಸಂಗ್ರಹಿಸಿ
- ಕಾನೂನಿನ ಪ್ರಕಾರ ಪುರಾವೆಗಳನ್ನು ಸಂಗ್ರಹಿಸಿ
- ಸಮಾಜಕ್ಕೆ ಉತ್ತಮ ಮಾದರಿಯಾಗಿ ವರ್ತಿಸಿರಿ




## ಯಾರನ್ನು ಸಂಪರ್ಕಿಸಬೇಕು ?

### ಸಹಾಯವಾಣಿ ಸಂಖ್ಯೆ

| | |
|---|---|
| ಭಾರತೀಯ ಮಹಿಳಾ ಸಹಾಯವಾಣಿ | 1091 |
| ಕೌಟುಂಬಿಕ ಶೋಷಣೆ ಸಹಾಯವಾಣಿ | 181 |
| ರಾಷ್ಟ್ರೀಯ ಮಹಿಳಾ ಆಯೋಗ | 011-26942369<br>011-26944754 |
| ಮಕ್ಕಳ ಸಹಾಯವಾಣಿ | 1098 |
| ಪೋಲೀಸ್ | 100 |




Violence Against Women
is A Social Evil with
Huge Impact
On Women's Health.

## LET'S TAKE A VOW TO ERADICATE VAW



**Dr Hrishikesh Pai**
President,
FOGSI

**Dr Madhuri Patel**
Secretary General,
FOGSI

**Dr Alka Pandey**
VP FOGSI
Incharge

**Dr Kiranmai Devineni**
Chairperson, No To
Violence Against
Women Committee

fogsiofficial · fogsiofficial · fogsiofficial · @fogsiHQ

Designed by PORE BROTHERS 9923300500

## FOGSI PRESIDENTIAL INITIATIVE

# SAMATA

## GENDER EQUALITY

**INTERNATIONAL DAY**
**FOR ELIMINATION OF VAW**
NOVEMBER 25TH, 2023

An initiative by **FOGSI**



# UNITE
## INVEST TO PREVENT
# VAW

President **Dr Hrishikesh Pai**
Secretary General **Dr Madhuri Patel**
Vice President **Dr Alka Pandey**
Chairperson - No to Violence Against Women Committee
**Dr Kiranmai Devineni**

Contributors - **Kannada**
**Dr Rajalakshmi**



FOGSI PRESIDENTIAL INITIATIVE

# SAMATA

GENDER EQUALITY

**INTERNATIONAL DAY**
**FOR ELIMINATION OF VAW**
NOVEMBER 25TH, 2023

## VAW ಮಹಿಳಾ ದೌರ್ಜನ್ಯ ಎಂದರೇನು

ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯ ಆಕೆಯ ಆರೋಗ್ಯ ಹಾಗೂ ಜೀವಕ್ಕೆ ಅಪಾಯ ತಂದೊಡ್ಡುವ ಬಹುದೊಡ್ಡ ಜಾಗತಿಕ ಸಮಸ್ಯೆ , ಮಾನವ ಹಕ್ಕುಗಳ ಉಲ್ಲಂಘನೆಯಾಗಿರುತ್ತದೆ.

ವಿಶ್ವ ಸಂಸ್ಥೆಯ article 1 ವ್ಯಾಖ್ಯಾನಿಸುವಂತೆ ಯಾವುದೇ ಲಿಂಗಾಧಾರಿತ ಹಿಂಸೆ ಅಥವಾ ಅದರ ಪರಿಣಾಮವಾಗಿ ಉಂಟಾಗುವ ದೈಹಿಕ, ಲೈಂಗಿಕ ಹಾಗೂ ಮಾನಸಿಕ ಆಘಾತ ಮಹಿಳಾ ದೌರ್ಜನ್ಯ ವೆಂದು ಕರೆಯಲ್ಪಡುತ್ತದೆ. ಇದು ಬೆದರಿಕೆ, ಸ್ವಾತಂತ್ರ್ಯಕ್ಕೆ ಧಕ್ಕೆ ಮತ್ತು ಬಲಾತ್ಕಾರವಾಗಿರಬಹುದು. ಸಾರ್ವಜನಿಕವಾಗಿ ಅಥವಾ ಖಾಸಗಿಯಾಗಿ ನಡೆದಿರಬಹುದು.

## VAW ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯ ಎಷ್ಟು ಸಾಮಾನ್ಯ? ಸಮಸ್ಯೆ ಯು ಗಂಭೀರತೆ

ವಿಶ್ವದೆಲ್ಲೆಡೆ 736 ಮಿಲಿಯನ್ ಮಹಿಳೆಯರು, ಅಂದರೆ ಮೂರರಲ್ಲಿ ಒಬ್ಬಾಕೆ ಜೀವನದಲ್ಲಿ ಒಂದು ಬಾರಿಯಾದರೂ ತನ್ನ ಸಂಗಾತಿ , ಇತರರು ಅಥವಾ ಇಬ್ಬರಿಂದಲೂ ದೈಹಿಕ ಹಾಗೂ/ಅಥವಾ ಲೈಂಗಿಕ ಶೋಷಣೆಗೊಳಗಾಗುತ್ತಾಳೆ 2020 ರಲ್ಲಿ ಜಗತ್ತಿನಾದ್ಯಂತ 81,000 ವನಿತೆಯರು ಹಾಗೂ ಹೆಣ್ಣು ಮಕ್ಕಳು ಸಾವನ್ನಪ್ಪಿರುತ್ತಾರೆ.

VAW

## VAW ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯಕ್ಕೆ ಕಾರಣಗಳೇನು?

- ವಿಷಕಾರಿ ಪುರುಷತ್ವ (Toxic Masculinity)
- ಲಿಂಗ ಪಕ್ಷಪಾತ (Gender bias)
- ಪಿತೃ ಪ್ರಧಾನ ಸಮಾಜ (Patriarchal society)
- ಲಿಂಗ ರೂಢ ಮಾದರಿ (Gender stereotyping)
- ಲಿಂಗ ಭೇದ ಭಾವ (Sexism)

## ಈ VAW ಬಗ್ಗೆ ಸ್ತ್ರೀ ರೋಗ ತಜ್ಞರು ಯಾಕೆ ತಿಳಿದಿರಬೇಕು? ಹಾಗೂ ತಿಳಿಸಬೇಕು?

ಮಹಿಳೆಯರ ಹಲವು ತೀವ್ರ/ಧೀರ್ಘ ಕಾಲದ ಆರೋಗ್ಯ ಸಮಸ್ಯೆಗಳಿಗೆ ಹಿಂಸೆ ಕಾರಣವಾಗಿರಬಹುದು. ಗರ್ಭಿಣಿ ಸ್ತ್ರೀಯರಲ್ಲಿನ ಹಲವು ದೈಹಿಕ ಸಮಸ್ಯೆಗಳು ಹಿಂಸೆಯಿಂದಾಗಿರಬಹುದು. ಮಹಿಳೆಯರ ಸ್ವಾಸ್ಥ್ಯದ ದೃಷ್ಟಿಯಿಂದ ಒಬ್ಬ ಸ್ತ್ರೀ ಸಾಮಾನ್ಯವಾಗಿ ಭೇಟಿಯಾಗುವ, ಸಂಪರ್ಕಿಸುವ ಪ್ರಥಮ ವ್ಯಕ್ತಿ ಹೆರಿಗೆ ಹಾಗೂ ಸ್ತ್ರೀ ರೋಗ ತಜ್ಞರಾಗಿರುತ್ತಾರೆ. ಪ್ರಾಥಮಿಕ ಆರೈಕೆದಾರರೂ ಸ್ತ್ರೀ ರೋಗ ತಜ್ಞರಾಗಿದ್ದು ಮಹಿಳೆಯರು ತಮ್ಮ ಸಮಸ್ಯೆಗಳ / ಹಿಂಸೆಯ ಬಗ್ಗೆ ಅವರಲ್ಲಿ ಹೇಳಿ ಕೊಳ್ಳುತ್ತಾರೆ. ಸ್ತ್ರೀ ರೋಗ ತಜ್ಞರು ಈ ಬಗ್ಗೆ ಜಾಗೃತರಾಗಿದ್ದಾಗ ದೌರ್ಜನ್ಯವನ್ನು ಗುರುತಿಸಿ, ಅಗತ್ಯ ಪ್ರಥಮ ಚಿಕಿತ್ಸೆ ನೀಡಿ ಮುಂದಿನ ತಪಾಸಣೆ ಹಾಗೂ ಚಿಕಿತ್ಸೆಗಾಗಿ ಸುಸಜ್ಜಿತ ಆಸ್ಪತ್ರೆಗೆ ಕಳುಹಿಸಿ ಕೊಡಬಹುದು. ತಮ್ಮನ್ನು ಸಂಪರ್ಕಿಸಿದ ದೌರ್ಜನ್ಯಕ್ಕೊಳಗಾದ ಮಹಿಳೆಯರಿಂದ ಅಗತ್ಯವಿರುವ ಪುರಾವೆಗಳನ್ನು ಸಂಗ್ರಹಿಸಬಹುದು.

## ಮಹಿಳಾ ದೌರ್ಜನ್ಯದ ವಿಧಗಳು

- **ಶಾರೀರಿಕ ಹಿಂಸೆ:**
  ಹೆಣ್ಣು ಭ್ರೂಣ ಹತ್ಯೆ, ಸ್ತ್ರೀ ಹತ್ಯೆ, ಮರ್ಯಾದಾ ಹತ್ಯೆಗಳು, ಆಸಿಡ್ ದಾಳಿ, ಲೈಂಗಿಕ ಶೋಷಣೆ
- **ಮಾನಸಿಕ ಹಿಂಸೆ:**
  ಆರ್ಥಿಕ ದುರುಪಯೋಗ, ಮಾನಸಿಕ ಅತ್ಯಾಚಾರ, ಭಾವನಾತ್ಮಕ ಅತ್ಯಾಚಾರ, ಹಿಂಬಾಲಿಸುವಿಕೆ, ಕಿರುಕುಳ, ಗೋಳು ಹೊಯ್ದು ಕಿರುಕುಳ, ಕ್ರಿಮಿನಲ್ ಬೆದರಿಕೆ
- **ಸಂಯುಕ್ತ:** ಕೌಟುಂಬಿಕ ಹಿಂಸೆ

## ರಕ್ಷಣೆ ನೀಡುವ ಕಾಯಿದೆಗಳು

- **ಆಸಿಡ್ ದಾಳಿ ಪ್ರಯತ್ನ:**
  IPC section 326B :
  5-7 ವರ್ಷ ಕಾರಾಗೃಹ ವಾಸ ,ದಂಡವನ್ನು ವಿಧಿಸಬಹುದು
- **ಆಸಿಡ್ ದಾಳಿ:**
  IPC Section 326A : ಹತ್ತು ವರ್ಷಗಳ ಅವಧಿಯ ಕಾರಾಗೃಹ ವಾಸ, ಜೀವಾವಧಿ ಶಿಕ್ಷೆಯನ್ನು ವಿಧಿಸಬಹುದು

- **ಲೈಂಗಿಕ ದೌರ್ಜನ್ಯ**
  - IPC Section 354 1-5 ವರ್ಷಗಳ ಸಜೆ ಮತ್ತು ದಂಡ
  - ನಿರ್ಭಯಾ ಕಾಯಿದೆ 2013
  - IPC Section 375 ಲೈಂಗಿಕ ಅತ್ಯಾಚಾರದ ವಿರುದ್ಧ
  - IPC Section 354 A ಲೈಂಗಿಕ ಕಿರುಕುಳ, ಅನಗತ್ಯ ದೈಹಿಕ ಸ್ಪರ್ಶದ ವಿರುದ್ಧ
  - POCSO Act 2012 ಮಕ್ಕಳಿಗೆ ಲೈಂಗಿಕ ದೌರ್ಜನ್ಯದಿಂದ ರಕ್ಷಣೆ
- **STALKING :**
  IPC Section 354D 1-3 ವರ್ಷಗಳ ಜೈಲು ಶಿಕ್ಷೆ, ದಂಡವನ್ನು ವಿಧಿಸಬಹುದು
- **VOYEURISM:**
  IPC Section 354C
  ಮೊದಲ ಬಾರಿಗೆ 1-3 ವರ್ಷಗಳ ಜೈಲು ಶಿಕ್ಷೆ
  ಪುನರಾವರ್ತಿಸಿದಲ್ಲಿ 3-7 ವರ್ಷಗಳ ಜೈಲು ಶಿಕ್ಷೆ
- **EVE TEASING:**
  IPC Section 294 -3 ತಿಂಗಳ ಸಜೆ
  IPC Section 509 ಮಹಿಳೆಯೊಂದಿಗೆ ಯಾವುದೇ ಪುರುಷ ಅಸಭ್ಯವಾಗಿ ವರ್ತಿಸಿದರೆ, ಮಹಿಳೆಯರನ್ನು ಅವಮಾನಿಸಲು ಯಾವುದೇ ವಸ್ತುವನ್ನು ಬಳಸಿದರೆ 3 ವರ್ಷಗಳ ಜೈಲು ಶಿಕ್ಷೆ
- **ಕ್ರಿಮಿನಲ್ ಬೆದರಿಕೆ:**
  IPC Section 503 - 2 ವರ್ಷಗಳ ಜೈಲು ಶಿಕ್ಷೆ ಮತ್ತು/ದಂಡ

